ಕರ್ನಾಟಕ ವಿಧಾನ ಸಭೆ

ಬುಧವಾರ, ದಿನಾಂಕ ೪ನೇ ಫೆಬ್ರವರಿ ೧೯೮೭

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧–೦೦ ಘಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಜಿಲ್ಲಾ ಪರಿಷತ್ ಯೋಜನೆಗಳಿಗಾಗಿ ಹಣ ಬಿಡುಗಡೆ

೬೦ (೮೬) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ೧೯೮೬–೮೭ನೇ ಸಾಲಿಗೆ ಜಿಲ್ಲಾ ಪರಿಷತ್‌ಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗುವುದು ?

ಆ) ಯಾವ ಯಾವ ಯೋಜನೆಗಳಿಗೆ ಎಷ್ಟೆಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ೧೯೮೬–೮೭ನೇ ಸಾಲಿಗೆ ಜಿಲ್ಲಾ ಪರಿಷತ್‌ಗಳಿಗೆ ಯಾವ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯ್ತಿ ಚುನಾವಣೆಗಳು ಮುಗಿದಿವೆ. ದಿನಪತ್ರಿಕೆಯೊಂದರಲ್ಲಿ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯ್ತಿಗಳಿಗೆ ೮೦೦ ಕೋಟಿ ರೂಪಾಯಿ ರಿಲೀಸ್ ಮಾಡಿದ್ದೇವೆಂದೂ, ಮತ್ತೊಂದು ಸಾರಿ ೪೦೦ ಕೋಟಿ ರೂಪಾಯಿ ರಿಲೀಸ್ ಮಾಡಿದ್ದೇವೆಂದು ಪ್ರಕಟಿಯಾಗಿತ್ತು. ಗ್ರಾಮಾಂತರ ಪ್ರದೇಶದಲ್ಲಿ ೮೦ ಪರ್ಸೆಂಟ್ ಜನ ವಾಸ ಮಾಡುತ್ತಿರುವಾಗ ೩೨೦೦ ಕೋಟಿ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಅಲಾಟ್ ಮಾಡ ಬೇಕಾಗುತ್ತದೆ. ಗ್ರಾಮೀಣಾಭಿವೃದ್ಧಿ ವಿಚಾರಧಲ್ಲಿ ಇಷ್ಟೊಂದು ಕಾಳಜಿ ವಹಿಸಿ, ಈಗ ಮಾನ್ಯ ಮಂತ್ರಿಯವರು ಕೊಟ್ಟ ಉತ್ತರವನ್ನು ನೋಡಿದರೆ ನಮಗೆ ನಾಚಿಕೆಯಾಗುತ್ತದೆ. ಮೂರು ತಿಂಗಳಿಂದ ಯಾವ ಕೆಲಸಗಳೂ ನಡೆಯುತ್ತಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಯವರು ಸೂಕ್ತ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.–ಸಭಾಧ್ಯಕ್ಷರೇ, ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯ್ತಿಗಳು ಬರುವುದಕ್ಕೆ ಮುಂಚೆ ಕೂಡ ಆರ್ಥಿಕವಾಗಿ ಕೆಲವು ಕಾರ್ಯಕ್ರಮಗಳನ್ನು ವಿಕೇಂದ್ರೀಕರಣ ಮಾಡಿ ಡಿ.ಡಿ.ಸಿ. ಯವರು ಮಂಜೂರಾತಿ ಕೊಟ್ಟಂಥ ಗ್ರಾಮಾಭಿವೃದ್ಧಿ ಕೆಲಸಗಳು ನಡೆಯುತ್ತಿವೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯ್ತಿಗಳು ಇನ್ನೂ ಅಸ್ತಿತ್ವಕ್ಕೆ ಬಂದಿಲ್ಲ. ಅಧ್ಯಕ್ಷರು, ಉಪಾಧ್ಯಕ್ಷರು, ಪ್ರಧಾನ ಮತ್ತು ಉಪಪ್ರಧಾನರ ಹುದ್ದೆಗೆ ಆಯ್ಕೆ ಆಗಬೇಕಾಗಿದೆ. ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣ ಕೊಡಲಾಗಿದೆ ಎಂಬ ವಿವರಗಳನ್ನು ಹಾಗೂ ಬಾಬುಗಳನ್ನು ವರ್ಗಾಯಿಸುತ್ತೇವೆ ಎನ್ನುವುದನ್ನು ಸಭೆಯ ಮುಂದಿಡುತ್ತೇನೆ. ಮಾನ್ಯ ಸದಸ್ಯರುಗಳು ೮೦೦ ಕೋಟಿ, ೪೦೦ ಕೋಟಿ

ಎಂದು ಹೇಳಿದರು. ಮುಂದೆ ಬರತಕ್ಕ ಜಿಲ್ಲಾ ಪರಿಷತ್ತುಗಳಿಗೆ ಹಾಗೂ ತಾಲೂಕು ಪಂಚಾಯ್ತಿಗಳಿಗೆ ಶೇಕಡ ೪೦ ಅಂದರೆ, ೩೬೦ ಕೋಟಿ ಯೋಜನೆಯಲ್ಲಿ ಯೋಜನಾಹಿತವಾಗಿ ೫೬೦ ಕೋಟಿ ರೂಪಾಯಿಗಳನ್ನು ವರ್ಗಾವಣೆ ಮಾಡಲಾಗುವುದೆಂದು ಹೇಳಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಜನಸಂಖ್ಯೆ ಆಧಾರವನ್ನು ತೆಗೆದುಕೊಂಡರೆ, ೧೦೦ಕ್ಕೆ ೮೦ ಜನ ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ೪೦೦೦ ಕೋಟಿ ಬಜೆಟ್ಟಿನಲ್ಲಿ ೩೨೦೦ ಕೋಟಿ ರೂಪಾಯಿ ಗ್ರಾಮೀಣ ಪ್ರದೇಶಗಳಿಗೆ ಬರುತ್ತದೆ. ೫೫೦ ಕೋಟಿ ಅಂದರೆ ಕಾಲು ಭಾಗ ಕೂಡ ಬರುವುದಿಲ್ಲ. ಮೊನ್ನೆ ನಡೆದ ಸಮ್ಮೇಳನಕ್ಕೆ ಬಂದಂಥ ಜನಗಳಿಗೆ ಆಹಾರದ ಪೊಟ್ಟಣಗಳನ್ನು ಒದಗಿಸಲಿಕ್ಕೆ ಎರಡು ಕೋಟಿ ಖರ್ಚು ಮಾಡಿದ್ದೀರಿ. ಆದರಲ್ಲಿ ೩೦,೦೦೦ ಪೊಟ್ಟಣಗಳು ಖಾಲಿ ಇರುವುದನ್ನು ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ. ಕಾಪೆರ್ ಕಾಂಟಿನೆಂಟಲ್ ಹೋಟೆಲ್‌ನವರ ಮೇಲೆ, ಅವರು ಮೋಸ ಮಾಡಿರುವುದರಿಂದ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಪಳ್ಳಿಗಳ ಕಡೆ ಹೆಚ್ಚು ಗಮನ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಹಳ್ಳಿಗಳ ಕಡೆ ಹೆಚ್ಚು ಗಮನ ಕೊಡಬೇಕು. ಈಗ ಕೊಡುತ್ತಿರುವ ಹಣ ಕಡಿಮೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಆರ್ಥಿಕ ಚೌಕಟ್ಟಿನಲ್ಲಿ ಯಾವ ಯಾವ ಯೋಜನೆಗಳು ಗ್ರಾಮೀಣ ಭಾಗಕ್ಕೆ ಬರುತ್ತವೆ. ಅವುಗಳನ್ನು ವರ್ಗಾವಣೆ ಮಾಡತಕ್ಕ ನಿರ್ಧಾರ ಮಾಡುತ್ತೇವೆ. ಬಹುಶಃ ಭಾರತ ದೇಶದಲ್ಲಿ ಎರಡೂವರೆ ಲಕ್ಷ ಪಂಚಾಯ್ತಿಗಳು ಇದ್ದು. ಇವುಗಳು ಖರ್ಚು ಮಾಡುವ ಹಣದಲ್ಲಿ ಪೆಚ್ಚಿನ ಹಣವನ್ನು ಕರ್ನಾಟಕದ ಪಂಚಾಯ್ತಿಗಳು ಖರ್ಚು ಮಾಡುತ್ತವೆ ಎಂಬುದನ್ನು ಸದನದ ಗಮನಕ್ಕೆ ತರುತ್ತೇನೆ. ಆಹಾರಕ್ಕೆ ೨ ಕೋಟಿ ರೂಪಾಯಿ ಖರ್ಚಾಗಿಲ್ಲ. ನೀವು ಹೇಗೆ ೨ ಕೋಟಿ ರೂಪಾಯಿ ಲೆಕ್ಕ ಹಾಕಿದ್ದೀರೋ ಗೊತ್ತಾಗಲಿಲ್ಲ. ಎಷ್ಟು ಖರ್ಚಾಗಿದೆ ಎನ್ನುವುದನ್ನು ಈ ಸದನದ ಮುಂದೆ ಹೇಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—೩೦ ಸಾವಿರ ಫುಡ್ ಪ್ಯಾಕೆಟ್ ಸಪ್ಲೈ ಮಾಡಿಲ್ಲ. ನಮ್ಮ ಊರಿನ ರೈತರು ಹಾಗೆಯೇ ವಾಪಸ್ಸು ಹೋಗಿದ್ದಾರೆ. ೩೦ ಸಾವಿರ ಖಾಲಿ ಪ್ಯಾಕೆಟ್ ತೆಗೆದುಕೊಂಡು ಬಂದಿದ್ದನ್ನು ನಿಮ್ಮ ಅಧಿಕಾರಿಗಳೇ ಹಿಡಿದಿದ್ದಾರೆ. ಖಾಲಿ ಪ್ಯಾಕೆಟ್ ತಂದವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಈ ಪ್ರಶ್ನೆ ಆದರಲ್ಲಿ ಉದ್ಭವಿಸುವುದಿಲ್ಲ. ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ.

ಗುಲ್ಬರ್ಗಾ ತಾಲ್ಲೂಕಿನ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ

೬೧ (೨೫೭) ಶ್ರೀ ಕೆ.ಬಿ. ಶಾಣಪ್ಪ (ಶಹಬಾದ್).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಕೌಲಗಾ 'ಕೆ' ಮಿಣಜಗಿ, ಬತ್ತದ ಸರಡಗಿ (ಗುಲ್ಬರ್ಗಾ) ಗ್ರಾಮಗಳಲ್ಲಿ ಎನ್.ಆರ್.ಡಬ್ಲ್ಯೂ.ಎಸ್. ಮತ್ತು ಮಿನಿವಾಟರ್ ಯೋಜನೆಗಳನ್ನು ಆಳವಡಿಸಿದ್ದರೂ ಇನ್ನೂ ಈ ಗ್ರಾಮಗಳ ನೀರಿನ ಸಮಸ್ಯೆ ಬಗೆಹರಿಯದಿರಲು ಕಾರಣಗಳೇನು ?

ಆ) ಈ ವರ್ಷ ಬೇಸಿಗೆಯಲ್ಲಿ ಈ ಗ್ರಾಮಗಳಿಗೆ ನೀರಿನ ತೊಂದರೆಯಾಗದಂತೆ ಸರಕಾರದವರು ಕೈಗೊಳ್ಳುವ ಕ್ರಮಗಳೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು),—

ಅ) ೧) ಕೌಲಗಾ 'ಕೆ' ಈ ಗ್ರಾಮದ ಕಿರು ನೀರು ಸರಬರಾಜು ಯೋಜನೆಗೆ ತೆರೆದ ಬಾವಿಯಿಂದ ನೀರನ್ನು ಒದಗಿಸಲಾಗುತ್ತಿತ್ತು. ಆದರೆ, ತೆರೆದ ಬಾವಿಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿರುವುದರಿಂದ ತೊಂದರೆಯುಂಟಾಗಿದೆ.

ಈ ಗ್ರಾಮಕ್ಕೆ ನೀರನ್ನೊದಗಿಸಲು ಭೂ ಶಾಸ್ತ್ರಜ್ಞರಿಂದ ಸ್ಥಳವನ್ನು ಗುರುತಿಸಲಾಗಿದೆ. ಇದರ ಅಂದಾಜು ವೆಚ್ಚ ರೂ. ೬೦,೦೦೦ ಆಗಿರುತ್ತದೆ. ಈ ಕಾರ್ಯವನ್ನು ಮುಂದಿನ ವರ್ಷ ತೆಗೆದುಕೊಳ್ಳಲಾಗುವುದು.